**ಸಾಕ್ಷಿಗೆ ದಿನಾಂಕ 12.07.2017 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಪಾಟೀಸವಾಲುಃ 1ನೇ ಎದುರುದಾರರ ಪರಃ ಶ್ರೀ ಡಿಎನ್‌ಎಂ ವಕೀಲರಿಂದಃ**

ನನ್ನ ತಂದೆಯ ಹೆಸರು ಬೋಜಣ್ಣ ಎಂದು ಇರುತ್ತದೆ. ವಾಹನ ನೋಂದಣಿ ಸಂಖ್ಯೆ ಕೆಎ-02-ಇಡಬ್ಲ್ಯೂ-1293 ವಾಹನಕ್ಕೆ ನಾನು ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿಯಲ್ಲಿ ವಿಮೆ ಪಡೆದಿರುತ್ತೇನೆ. ಸದರಿ ವಿಮೆ ಪತ್ರವನ್ನು ನನ್ನ ಹೆಸರಿಗೆ ಅಂದರೆ ದಿನೇಶ್ ವಾಹನ ಮಾಲೀಕರೆಂದು ಪಡೆದಿರುತ್ತೇನೆ.

2. ನನ್ನ ಮಾಲೀಕತ್ವದ ಮೇಲೆ ಹೇಳಿದ ಬೈಕ್ ಅಪಘಾತಕ್ಕೀಡಾದಾಗ ಆ ವಿಷಯವನ್ನು ನಾನು ಬೈಕ್‌ಗೆ ತೆಗೆದುಕೊಂಡು ವಿಮಾ ಕಂಪನಿಗೆ ತಿಳಿಸಿರುವುದಿಲ್ಲ. ವಿಮೆ ಪತ್ರದಲ್ಲಿ ಏನು ಕಟ್ಟಳೆಗಳನ್ನು ಹಾಕಲಾಗಿದೆ ಎಂದು ನಾನು ಓದಿಕೊಂಡಿಲ್ಲ. ಈ ಕೇಸಿನ ಅರ್ಜಿದಾರ ನಮ್ಮ ಊರಿನವರು ಇದ್ದು, ನಮ್ಮ ಮನೆಯ ಪಕ್ಕದ ವಾಸಿ ಎಂದರೆ ಸರಿ. ಮುಖ್ಯವಿಚಾರಣೆಯ ಖಂಡಿಕೆ 1 ರಲ್ಲಿ ಕಾಣಿಸಿದಂತೆ ದಿ.4-12-2013 ರಂದು ಮೇಲೆ ಹೇಳಿದ ನನ್ನ ಮಾಲೀಕತ್ವದ ಬೈಕ್‌ನಲ್ಲಿ ಅವರು ಹಿಂಬದಿ ಸವಾರನೆಂದುಬರುತ್ತಿರಲಿಲ್ಲವೆಂದರೆ ಸರಿಯಲ್ಲ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ದಿ4-12-2013 ರಂದು ಜಗದೀಶ್ ಇವರು ನನ್ನ ಬೈಕ್‌ನಲ್ಲಿ ಹಿಂಬದಿ ಸವಾರನೆಂದು ಬಂದು ಗಾಯಗೊಳ್ಳದೇ, ಬೇರೆ

ಎಲ್ಲಿಯೂ ಗಾಯ ಮಾಡಿಕೊಂಡಿದ್ದರೂ ಕೂಡ, ನನ್ನ ಬೈಕ್‌ನಲ್ಲಿ ಬಂದಿದ್ದರೆಂದು ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುವೆನೆಂದರೆ ಸರಿಯಲ್ಲ.

3.ನಾನು ಬೈಕ್ ಚಲಾಯಿಸುವ ಡಿಎಲ್‌ನ್ನು ಬೆಂಗಳೂರಿನ ರಾಜಾಜಿನಗರ ಆರ್‌ಟಿಓ ಕಚೇರಿಯಿಂದ ಪಡೆದಿದ್ದು, 4 ಚಕ್ರದ ವಾಹನ ಚಲಾಯಿಸುಲು ಡಿಎಲ್‌ನ್ನು ನೆಲಮಂಗಲ ಆರ್‌ಟಿಓ ಕಚೇರಿಯಿಂದ ಪಡೆದಿರುತ್ತೇನೆ. ನಿ.ಆರ್3 ಎಂದು ಗುರುತಿಸಿದ ದಾಖಲೆಯಲ್ಲಿ ಡಿಎಲ್ ಪಡೆದ ವ್ಯಕ್ತಿಯ ಹೆಸರು ಬೋಜಣ್ಣ ದಿನೇಶ್ ಎಂದು ನಮೂದು ಇದೆ ಎಂದು ಸೂಚಿಸಲಾಗಿ, ಹೌದು, ನನ್ನ ಹೆಸರು ಬಿ. ದಿನೇಶ್ ಇದ್ದು, ಆದರಿಂದ ಆರ್‌ಟಿಓ ಕಚೇರಿಯವರು ಬೋಜಣ್ಣ ದಿನೇಶ್ ಎಂದು ನಮೂದಿಸಿರಬಹುದೆಂದು ಸಾಕ್ಷಿ ಹೇಳುತ್ತಾರೆ. ನನ್ನ ಹೆಸರನ್ನು ಬೋಜಣ್ಣ ದಿನೇಶ್ ಮತ್ತು ಬಿ. ದಿನೇಶ್‌ಎಂದು ಕೂಡ ಕರೆಯುವರೆಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಕಿರುವುದಿಲ್ಲ.

4. ನೆಲಮಂಗಲ ಆರ್‌ಟಿಓ ಕಚೇರಿಯಿಂದ ನಾನು ಡಿಎಲ್‌ನ್ನು ಯಾವಾಗ ಪಡೆದೆನೆಂದು ನನಗೆ ದಿನಾಂಕ ನೆನಪಿಲ್ಲ. ನಿ.ಆರ್3 ಎಂದು ಗುರುತಿಸಿದ ದಾಖಲೆ ನೋಡಲಾಗಿ, ಅದರಲ್ಲಿ ನನಗೆ ಬೈಕ್ ಚಲಾಯಿಸುವ ಡಿಎಲ್ ಇರದ ಬಗ್ಗೆ ಕಾಣುವುದೆಂದರೆ ಸರಿ. ನೆಲಮಂಗಲ ಆರ್‌ಟಿಓ ಕಚೇರಿಗೆ ನಾನು ಡಿಎಲ್

ಕೊಡುವಂತೆ ಕೋರಿ ಅರ್ಜಿ ಸಲ್ಲಿಸಿದಾಗ, ದ್ವಿ-ಚಕ್ರ ವಾಹನಕ್ಕೂ ಕೂಡ, ಅನ್ವಯವಾಗುವಂತೆ ಡಿಎಲ್ ಕೊಡಿರೆಂದು ನಾನೇನು ಕೇಳಿರುವುದಿಲ್ಲ. ಅಪಘಾತವಾಯಿತೆಂದು ಹೇಳಿದ ನಂತರ ಪೋಲಿಸರುನಿಮ್ಮ ಬೈಕ್‌ನ್ನು ಜಪ್ತುಗೊಳಿಸಿದಾಗ, ನೀವು ಪೋಲಿಸರ ಮುಂದೆ ನೆಲಮಂಗಲ ಆರ್‌ಟಿಓ ಕಚೇರಿಯಿಂದ ಪಡೆದ ಡಿಎಲ್ ಹಾಜರುಪಡಿಸಿರುವಿರೆಂದು ಸೂಚಿಸಲಾಗಿ, ಹೌದು, ಕಾರಣ ನನಗೆ ಆ ವೇಳೆಗೆ ಯಾವ ಡಿಎಲ್ ಕೊಡಬೇಕೆಂದು ತಿಳಿಯಲ್ಲಿವೆಂದು ಸಾಕ್ಷಿ ಹೇಳುತ್ತಾರೆ. ಆದಾದ ನಂತರ ನಾನು ಪೋಲಿಸ್ ಠಾಣೆಗೆ ಹೋಗಿ, ನನಗೆ ಬೈಕ್ ಚಲಾಯಿಸುವ ಡಿಎಲ್ ಇರುವುದೆಂದು ತೋರಿಸಲು ಪೋಲಿಸರ ಮುಂದೆ ಡಿಎಲ್ ಕೊಟ್ಟಿರುತ್ತೇನೆ. ಸದರಿ ಸಮಯದಲ್ಲಿ ಪೋಲಿಸರು ಆ ಬಗ್ಗೆ ನನ್ನ ಹೇಳಿಕೆಯನ್ನು ಕೂಡ ಪಡೆದಿರುತ್ತಾರೆ. ಸದರಿ ಮೇಲೆ ಹೇಳಿದ ಹೇಳಿಕೆಯ ನಕಲು ಪ್ರತಿಯನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆ ಇಲ್ಲ. ಬೆಂಗಳೂರಿನ ರಾಜಾಜಿನಗರ ಆರ್‌ಟಿಓ ಕಚೇರಿಯಿಂದ ನಾನು ಪಡೆದಿರುವೆನೆಂದು ಹೇಳುವ ಡಿಎಲ್‌ನ್ನು 1999 ನೇ ಸಾಲಿನಲ್ಲಿ ಪಡೆದಂತೆ ನೆನಪಿದೆ. ನಿ.ಆರ್3 ಮತ್ತು 4 ಎಂದು ಗುರುತಿಸಿದ ದಾಖಲೆಯಲ್ಲಿ ಹೆಸರುಗಳು ಬೇರೆ ಬೇರೆ ಇದ್ದು, ಅದರಿಂದ ಅವು ಎರಡು ನನಗೆ

ಸೇರಿನ ದಾಖಲೆಗಳು ಇರುವುದಿಲ್ಲವೆಂದರೆ ಸರಿಯಲ್ಲ. ನೆಲಮಂಗಲ ಆರ್‌ಟಿಓ ಕಚೇರಿಯಲ್ಲಿ ಡಿಎಲ್ ಪಡೆಯುವಗ ಮತ್ತು ರಾಜಾಜಿನಗರ ಆರ್‌ಟಿಓ ಕಚೇರಿಯಿಂದ ಡಿಎಲ್ ಪಡೆಯುವಾಗ ನಾನು ಈಗಾಗಲೇ ಡಿಎಲ್ ಹೊಂದಿರುವೆನೆಂದು ಅವರುಗಳಿಗೆ ಮಾಹಿತಿ ಕೊಟ್ಟಿರುವುದಿಲ್ಲ. ರಾಜಾಜಿನಗರ ಆರ್‌ಟಿಓ ಕಚೇರಿಯಿಂದ ಡಿಎಲ್ ಪಡೆಯುವಾಗ, ನಾನು ನೆಲಮಂಗಲ ಆರ್‌ಟಿಓ ಕಚೇರಿಯಿಂದ ಡಿಎಲ್ ಪಡೆದ ಬಗ್ಗೆ ಸಂಬಂಧಸಿದ ಅಧಿಕಾರಿಯ ಬಳಿ ಹೇಳಿಲ್ಲ. ನಿ.ಆರ್4ಎಂದು ಗುರುತಿಸಿದ ಡಿಎಲ್‌ನ್ನು ಕೇಸಿಗೆ ಅನುಕೂಲವಾಗುವಂತೆ ಸೃಷ್ಟಿಸಿ ತಂದು ಹಾಜರುಪಡಿಸಿರುವೆನೆಂದರೆ ಸರಿಯಲ್ಲ. ನಿ,ಆರ್4 ಎಂದು ಗುರುತಿಸಿದ ದಾಖಲೆ ಸೃಷ್ಟಿಸಿದ ದಾಖಲೆ ಇದ್ದು, ಅದರಿಂದ ನೆಲಮಂಗಲದಲ್ಲಿ ಡಿಎಲ್ ಪಡೆಯುವಾಗ ನಾನು ಆ ವಿಷ್ಷಯ ಹೇಳಿಲ್ಲವೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ, ಡಿಎಲ್ ಪಡೆಯುವಾಗ, ನಾನು ಮೊದಲು ಹೊಂದಿದ ಡಿಎಲ್‌ನ ಬಗ್ಗೆ ಹೇಳಿಲ್ಲವೆಂದು ಹೇಳುತ್ತಾರೆ.

5. ನಿ.ಆರ್4 ಎಂದು ಗುರುತಿಸಿದ ದಾಖಲೆಯಲ್ಲಿ ಡಿಎಲ್ ಡ್ಯೂಪ್ಲಿಕೇಟ್ ಎಂದು ನಮೂದು ಇದ್ದು, ಅದರಿಂದ ಮೂಲ ಡಿಎಲ್ ಎಲ್ಲಿ ಎಂದು ಕೇಳಲಾಗಿ, ಅದು ಕಳೆದಿದ್ದು, ಅದರಿಂದ ಡ್ಯೂಪ್ಲಿಕೇಟ್ ಪಡೆದಿದ್ದೆನೆಂದು ಸಾಕ್ಷಿ

ಹೇಳುತ್ತಾರೆ. ಮೇಲೆ ಹೇಳಿದಂತೆ ನನ್ನ ಡಿಎಲ್ ಕಳೆದ ಬಗ್ಗೆ ಪೋಲಿಸರ ಮುಂದೆ ಫಿರ್ಯಾದಿ ಕೊಟ್ಟಿರುತ್ತೇನೆ, ಆದರೆ ಅದರ ಪ್ರತಿಯನ್ನು ನಾನೇನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿ.ಆರ್3 ಮತ್ತು 4 ರಲ್ಲಿ ಡಿಎಲ್ ಹೊಂದಿದ ವ್ಯಕ್ತಿಯ ಹೆಸರು ಬೇರೆ ಬೇರೆ ಇದ್ದು, ಅದರಿಂದ 2 ದಾಖಲೆಗಳಲ್ಲಿಯ ಹೆಸರು ನನ್ನದು ಇರದೇ, ಅವುಗಳು ಬೇರೆ ಬೇರೆ ವ್ಯಕ್ತಿಗೆ ಸೇರಿದ ದಾಖಲೆ ಎಂದರೆ ಸರಿಯಲ್ಲ.

6. ನೆಲಮಂಗಲ ಆರ್‌ಟಿಓ ಕಚೇರಿಯಿಂದ ಪಡೆದ ಡಿಎಲ್‌ನ ಪ್ರತಿ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆ ಇಲ್ಲ.

( ಈ ಹಂತದಲ್ಲಿ ಸಾಕ್ಷಿ ತನ್ನ ಬಳಿ ಇರುವ ಡಿಎಲ್‌ನ ಪುಸ್ತಕವನ್ನು ತೋರಿಸುತ್ತಿದ್ದು, ಅದನ್ನು ನೋಡಲಾಗಿ, ಅದರಲ್ಲಿ ನಿ.ಆರ್3 ಎಂದು ಗುರುತಿಸಿದ ದಾಖಲೆಯಲ್ಲಿಯ ಮಾಹಿತಿಯು, ನಮೂದು ಇದ್ದು, ನಂತರ ಪುಸ್ತಕವನ್ನು ಸಾಕ್ಷಿಗೆ ಹಿಂದುರುಗಿಸಲಾಗಿದೆ.)

7. ಈ ಮೊದಲು ನ್ಯಾಯಾಲಯ ದಿಂದ ಕಳುಹಿಸಿದ ನೋಟೀಸ್ ನನಗೆ ತಲುಪಿತ್ತು ಎಂದರೆ ಸರಿಯಲ್ಲ.